ಕಟ್ಟಡ ಕಾರ್ಯಗಳು ನಡೆಯುತ್ತಿರುವುದರಿಂದ ಅದನ್ನು ಮೊದಲು ಮುಗಿಸಬೇಕೆಂದು ಬಜೆಟ್ ಪ್ರಾವಿಷನ್ ಮಾಡಿಕೊಂಡಿದ್ದೇವೆ. ಮುಂದಿನ ತಿಂಗಳಲ್ಲಿ ಅವುಗಳನ್ನು ಪೂರ್ಣಗೊಳಿಸುತ್ತಿದ್ದೇವೆ. ಆದರೂ ಕೂಡ ಈ ವರ್ಷದ ಬಜೆಟ್‌ನಲ್ಲಿ ಅವರ ಕ್ಷೇತ್ರಕ್ಕೆ ಒಂದು ವಸತಿ ನಿಲಯವನ್ನು ಮಂಜೂರು ಮಾಡಲು ಕ್ರಮ ಜರುಗಿಸುತ್ತೇವೆ ಎಂದು ತಮ್ಮ ಮೂಲಕ ಭರವಸೆ ಕೊಡುತ್ತೇನೆ.

SRI S. RAJENDRAN : Thank you.

ಕೈಗಾರಿಕೆಗಳಿಗೆ ಬಿಡುಗಡೆ ಮಾಡಬೇಕಾದ ಇನ್‌ವೆಸ್ಟ್‌ಮೆಂಟ್ ಸಬ್ಸಿಡಿ ಮೊತ್ತದ ಬಿಡುಗಡೆ.

423 - ಶ್ರೀ ಎಂ. ವೀರಪ್ಪಮೊಯಿಲಿ (ಕಾರ್ಕಳ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1995-96, 1996-97, 1997-98 ಸಾಲಿನಲ್ಲಿ ಸರ್ಕಾರ ಕೈಗಾರಿಕೆಗಳಿಗೆ ಬಿಡುಗಡೆ ಮಾಡಬೇಕಾದ ಇನ್‌ವೆಸ್ಟ್‌ಮೆಂಟ್ ಸಬ್ಸಿಡಿ ಮೊತ್ತ ಎಷ್ಟು?*

ಆ) *ಅದರಲ್ಲಿ ಸಣ್ಣ ಕೈಗಾರಿಕೆಗಳಿಗೆ ಬಿಡುಗಡೆ ಮಾಡಬೇಕಾದ ಮೊತ್ತ ಎಷ್ಟು?*

ಇ) *ಎಷ್ಟು ಮೊತ್ತವನ್ನು ಆಯಾಯ ವರ್ಷದಲ್ಲಿ ಬಿಡುಗಡೆ ಮಾಡಲು ಬಾಕಿ ಇದೆ?*

ಶ್ರೀ ಬಿ.ಎ. ಮೊಯಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು) :

ಅ) ಸರ್ಕಾರವು ಕೈಗಾರಿಕೆಗಳಿಗೆ ವರ್ಷಾವಾರು ಬಿಡುಗಡೆ ಮಾಡಬೇಕಾಗಿದ್ದ ಇನ್‌ವೆಸ್ಟ್‌ಮೆಂಟ್ ಸಬ್ಸಿಡಿ ಮೊತ್ತ ಈ ಕೆಳಗಿನಂತಿರುತ್ತದೆ.

ಕ್ರ.ಸ.	ವರ್ಷ	ಮೊತ್ತ (ಕೋಟಿ ರೂ.ಗಳಲ್ಲಿ)
1.	1995-96	75.27
2.	1996-97	112.08
3.	1997-98	135.71

ಆ) ಸಣ್ಣ ಕೈಗಾರಿಕೆಗಳಿಗೆ ಬಿಡುಗಡೆ ಮಾಡಬೇಕಾದ ವರ್ಷವಾರು ವಿವರ ಈ ಕೆಳಗಿನಂತಿದೆ.

1.	1995-96	72.53
2.	1996-97	110.98
3.	1997-98	134.67

ಇ) ಆಯಾಯ ವರ್ಷದಲ್ಲಿ ಬಿಡುಗಡೆ ಮಾಡಲು ಬಾಕಿ ಇರುವ ಮೊತ್ತ ಈ ಕೆಳಗಿನಂತಿದೆ.

ಕ್ರ.ಸ.	ವರ್ಷ	ಮೊತ್ತ (ಕೋಟಿ ರೂ.ಗಳಲ್ಲಿ)
1.	1995-96	27.11
2.	1996-97	66.50
3.	1997-98	135.10

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕೊಟ್ಟಿರತಕ್ಕಂಥ ಉತ್ತರದಲ್ಲಿ ಒಟ್ಟು 323 ಕೋಟಿ ರೂಪಾಯಿಗಳಲ್ಲಿ ಅವರು ಈಗಾಗಲೇ ಕೊಟ್ಟಿರುವುದು 94 ಕೋಟಿ, 35 ಲಕ್ಷ ರೂಪಾಯಿಗಳು. ಇನ್ನೂ 221 ಕೋಟಿ 71 ಲಕ್ಷ ರೂಪಾಯಿಗಳು ಬಾಕಿ ಇವೆ. ಬಾಕಿ ಹಣವನ್ನು ಯಾವಾಗ ಕೊಡುತ್ತೀರಿ ? ಅಂತೆಯೇ ಈ ಸಣ್ಣ ಕೈಗಾರಿಕೆಗಳನ್ನು ಯಾವ ರೀತಿಯಲ್ಲಿ ರಕ್ಷಣೆ ಮಾಡುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಬಿ.ಎ. ಮೊಹಿದೀನ್ : ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಇದ್ದರೂ ಕೂಡ ಈ ಕ್ಷೇತ್ರದಲ್ಲಿ ಬಹಳಷ್ಟು ಬೆಳವಣಿಗೆಯಾಗಿದೆ.

10.50 ಎ.ಎಂ

1995-96ರಲ್ಲಿ 27.11 ಕೋಟಿ, 1996-97ರಲ್ಲಿ 66.50 ಕೋಟಿ, ಮತ್ತು 1997-98ರಲ್ಲಿ 135.10 ಕೋಟಿ ರೂಗಳು ಬಾಕಿ ಇರುವುದು ನಿಜ. ಈ ಮೊತ್ತದಲ್ಲಿ ಹೆಚ್ಚಳ ಉಂಟಾಗಲು ಕಾರಣವೇನೆಂದರೆ ಸಬ್ಸಿಡಿ ಪ್ರಮಾಣ ಶೇಕಡ 15ರಷ್ಟಿದ್ದುದನ್ನು 96ರಲ್ಲಿ 25ಕ್ಕೆ ಏರಿಸಿದೆವು ಹಾಗೂ ಹಿಂದುಳಿದ ವರ್ಗಗಳು ಮತ್ತು ಮಹಿಳೆ ಉದ್ದಿಮೆದಾರರಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಹೊಸ ಕಾರ್ಯಕ್ರಮಗಳನ್ನು ಅಳವಡಿಸಿದ್ದರಿಂದ ಮತ್ತು ಪ್ರೋತ್ಸಾಹಕರ ಸಬ್ಸಿಡಿ ಹೆಚ್ಚಿಸಿದ್ದರಿಂದಲೂ ಈ ಮೊತ್ತ ಜಾಸ್ತಿಯಾಗಿದೆ. ಈ ಮೊಬಲಗನ್ನು ಆದಷ್ಟು ಬೇಗನೆ ರಿಲೀಸ್ ಮಾಡುವ ಹಿನ್ನೆಲೆಯಲ್ಲಿ ನಾನು ಮಾನ್ಯ ಉಪಮುಖ್ಯಮಂತ್ರಿಗಳ ಜೊತೆಯಲ್ಲಿ ಹಲವಾರು ಮೀಟಿಂಗ್‌ಗಳನ್ನು ಮಾಡಿದ್ದೇನೆ ಹಾಗೂ ಆರ್ಥಿಕ ಕಾರ್ಯದರ್ಶಿಯವರ ಹತ್ತಿರ ಸಹ ಮಾತನಾಡಿದ್ದೇನೆ. ಹಾಲಿ ನಾವು ಒಂದು ನಿರ್ಣಯಕ್ಕೆ ಬಂದಿದ್ದೇವೆ. ಇದುವರೆಗೂ ಬಾಕಿ ಇರುವ ಹಣವನ್ನು ವರ್ಷಕ್ಕೆ ತಲಾ 50 ಕೋಟಿ ರೂ.ಗಳಂತೆ ಮೂರು ನಾಲು ವರ್ಷಗಳಲ್ಲಿ ತೀರಿಸಿಬಿಡಬೇಕು. ಎರಡನೆಯದು ಸೇಲ್ಸ್‌ಟಾಕ್ಸ್ ಕೊಡುವುದರಲ್ಲಿ ಯೂನಿಟ್ ಲೆಕ್ಕಾಚಾರ ಏನಿದೆ ಅದರ ಹೊಂದಾಣಿಕೆ ಮಾಡುವುದು ಕಷ್ಟವಾಗುತ್ತಿದೆ. ಈ ಪ್ರಶ್ನೆ ಅರ್ಥ ಇಲಾಖೆ ಮುಂದೆ ಇದ್ದು ಇದರ ಬಗ್ಗೆ ಅವರು ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳುವರೆಂಬ ನಂಬಿಕೆ ನನಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಸಚಿವರು 94-95ಕ್ಕಿಂತ ಮುಂಚೆ ಈಗಿರುವುದಕ್ಕಿಂತ ಹೆಚ್ಚು ಬಾಕಿ ಇತ್ತು, ತಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅದರ ಪರಿಮಾಣ ಕಡಿಮೆಯಾಗಿದೆ ಎಂದು

ಹೇಳಿದರು. ನಾನು ಕೇಳುವುದು ಹಿಂದಿನ ವರ್ಷದ ಸಬ್ಸಿಡಿ ಬಾಕಿ ಉಳಿದಿದ್ದರೆ ಅದನ್ನು ಮುಂದಿನ ವರ್ಷ ಬಜೆಟ್ ತಯಾರಿಕೆ ಹಂತದಲ್ಲೇ ಯಾಕೇ ಸೇರಿಸಿಕೊಳ್ಳಲಿಲ್ಲ? ಉದಾಹರಣೆಗೆ 96-97ರ ಬಾಕಿ 134.97 ಕೋಟಿ ರೂ.ಗಳಿದ್ದು, 97-98ರ ಆಯವ್ಯಯ ರಚಿಸುವಾಗ ಈ ಹಣವನ್ನೂ ಸೇರಿಸಿ ಏಕೆ ನೀವು ಫಿಗರ್‌ಗೆ ಅರೈವ್ ಆಗಲಿಲ್ಲ? ಕೆಲವು ಸಣ್ಣ ಉದ್ದಿಮೆದಾರರಿಗೆ ಮೂರ್ನಾಲ್ಕು ವರ್ಷಗಳಿಂದ ಸಬ್ಸಿಡಿ ಹಣ ತಲುಪಿಲ್ಲ, ಎಷ್ಟೋ ಉದ್ದಿಮೆದಾರರಿಗೆ ಬ್ಯಾಂಕ್‌ಗಳಲ್ಲಿ ತೆಗೆದ ಸಾಲಕ್ಕೆ ಬಡ್ಡಿ ಕಟ್ಟಲೂ ಆಗುತ್ತಿಲ್ಲ. ನಿಮ್ಮ ಬಜೆಟ್ ತಯಾರಿಕೆಯಲ್ಲಿ ದೋಷವಿದೆ ಅಂತ ನಾನು ಆರೋಪಿಸುತ್ತೇನೆ.

ಶ್ರೀ ಬಿ.ಎ. ಮೊಯಿದ್ದೀನ್ : ನಾನು ಆಗಲೇ ಹೇಳಿದೆ ಸಾಲದ ಪ್ರಮಾಣದಲ್ಲಿ ಹೈಕ್ ಆಗಿದೆ, ಇಂಡಸ್ಟ್ರೀಗಳೂ ಬಹಳ ಬಂದವು. ಅದರಿಂದ ಬಾಕಿ ಉಳಿಯಿತು. ಆದರೆ ಐದಾರು ವರ್ಷಗಳ ಹಿಂದಿನ ಪ್ರಮಾಣಕ್ಕೆ ಹೋಲಿಸಿದರೆ ಈಗ ಕಡಿಮೆಯಾಗಿದೆ. ಈಗ ಯಾವ ಇಂಡಸ್ಟ್ರೀ ಬರಬೇಕಾದರೂ ಸಬ್ಸಿಡಿ ಕೇಳುವ ಮಟ್ಟಕ್ಕೆ ಬಂದುಬಿಟ್ಟಿದೆ. ಇದರ ಬಗ್ಗೆ ಮರುಚಿಂತನೆ ಮಾಡುವ ಕಾಲ ಸನ್ನಿಹಿತವಾಗಿದೆ ಆದಷ್ಟು ಬೇಗನೆ ಸಬ್ಸಿಡಿ ಬಾಕಿ ಪಾವತಿ ಮಾಡುತ್ತೇವೆಂದು ಭರವಸೆ ಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಎಷ್ಟು ಬಾಕಿ ಇದೆ?

ಶ್ರೀ ಬಿ.ಎ. ಮೊಯಿದ್ದೀನ್ : ಒಟ್ಟು ನನಗೆ ಗೊತ್ತಿರುವ ಹಾಗೆ 20ಕೋಟಿ ರೂ.ಗಳ ಬಾಕಿ ಇದೆ.

ದೊಡ್ಡಬಳ್ಳಾಪುರ ನಗರಕ್ಕೆ ಒಳಚರಂಡಿ ವ್ಯವಸ್ಥೆ

424 - ಶ್ರೀ ಆರ್.ಜಿ. ವೆಂಕಟಾಚಲಯ್ಯ (ದೊಡ್ಡಬಳ್ಳಾಪುರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1998-99ನೇ ಸಾಲಿನಲ್ಲಿ ದೊಡ್ಡ ಬಳ್ಳಾಪುರ ನಗರಕ್ಕೆ ಒಳಚರಂಡಿ ವ್ಯವಸ್ಥೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?*

ಆ) *ಹಾಗಿದ್ದಲ್ಲಿ ಸದರಿ ಕೆಲಸವನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು?*

ಇ) *ಈ ಬಗ್ಗೆ ತಗಲಬಹುದಾದ ಅಂದಾಜು ವೆಚ್ಚ ಎಷ್ಟು?*

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಆರ್.ಜಿ. ವೆಂಕಟಾಚಲಯ್ಯ : ಅಧ್ಯಕ್ಷರೇ, ನನ್ನ ಮತಕ್ಷೇತ್ರ ದೊಡ್ಡಬಳ್ಳಾಪುರ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಮಾಡಿಕೊಡಬೇಕೆಂದು ನಾನು ಸಚಿವರಲ್ಲಿ ಪ್ರಶ್ನೆ ಮಾಡಿದ್ದುದು ಹಿಂದೆಯೂ ಈ ಬಗ್ಗೆ ನಾನು ಸಚಿವರಲ್ಲಿ ಬಿನ್ನವಿಸಿಕೊಂಡಿದ್ದಾಗ ಈ ವರ್ಷದ ಬಜೆಟ್‌ನಲ್ಲಿ ಇದನ್ನು ಸೇರಿಸುವುದಾಗಿ